**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಕ್ಕನಾಯಕನಹಳ್ಳಿ**

**ಸಿ.ಸಿ. ನಂ.2349/2022**

**ಸಿ ಡಬ್ಲ್ಯೂಃ 1**

**ಪಿ ಡಬ್ಲ್ಯೂಃ 1**

| | | |
|---|---|---|
| ಹೆಸರು | : | ಮಂಜುಳಾ |
| ಗಂಡನ ಹೆಸರು | : | ಗೋಪಿ ಹೆಚ್ |
| ವಯಸ್ಸು | : | 227 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಹುಳಿಯಾರು |

**ದಿನಾಂಕಃ 04.05.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ**

ಮೃತ ಗೋಪಿ ನನ್ನ ಗಂಡ ಆಗಬೇಕು. ನಾನು ಆರೋಪಿಯನ್ನು ನೋಡಿರುವುದಿಲ್ಲ. ಹೀಗ್ಗೆ ಸುಮಾರು 2 ವರ್ಷದ ಹಿಂದೆ ಮದ್ಯಾಹ್ನ ಸುಮಾರು 4.50 ಕ್ಕೆ ನನ್ನ ಗಂಡ ಮೈಸೂರಿನಿಂದ ಹುಳಿಯಾರಕ್ಕೆ ಬೈಕಿನಲ್ಲಿ ಬರುತ್ತಿರುವಾಗ ಒಂದು ಟಾಟಾ ಎಸಿ ವಾಹನವು ಗೋಪಲಾಪುರದ ಈಶ್ವರ ದೇವಸ್ಥಾನ ಸಮೀಪ ಅಪಘಾತಪಡಿಸಿ ಇದರಿಂದ ನನ್ನ ಗಂಡನ ತಲೆಗೆ ಕೈಕಾಲುಗಳಿಗೆ ಮತ್ತು ಇತರ ಭಾಗಕ್ಕೆ ತೀವ್ರ ಸ್ವರೂಪದ ಗಾಯವಾಗಿ ಮೃತಪಟ್ಟರು. ಆಗ ನಾನು ಮನೆಯಲ್ಲಿ ಇದ್ದು ಅಪಘಾತ ಹೇಗೆ ಆಗಿರುತ್ತದೆ ನಾನು ನೋಡಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ದೂರು ಕೊಟ್ಟಿರುತ್ತೇನೆ. ಅದರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದೂರನ್ನು ನಿಪಿ.1 ಎಂದು, ಸಾಕ್ಷಿಯ ಹೆಸರನ್ನು 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಟಾಟಾ ಎಸಿಯ ಪೋಟೋವನ್ನು ತೋರಿಸಿ ಸದರಿ ವಾಹನವನ್ನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿ ತನ್ನ ಗಂಡನ ಬೈಕ್ ನ ಪೋಟೋವನ್ನು ನೋಡಿ ಒಪ್ಪಿಕೊಳ್ಳುತ್ತಾರೆ. ಅದನ್ನು ನಿಪಿ.2 ಮತ್ತು 3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸ.ಸ.ಅ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಅವರಿಗೆ ಪಾಟೀ ಸವಾಲು ಮಾಡಲು ಅನುಮತಿಸಬೇಕೆಂದು ಕೇಳಿಕೊಂಡ ಮೇರೆಗೆ ಅನುಮತಿಸಲಾಗಿದೆ)**

ಪಾಟೀ ಸವಾಲುಃ ಎ ಪಿ ಪಿ ರವರಿಂದಃ

ನನ್ನ ಮದುವೆ ಗೋಪಿಯವರೊಂದಿಗೆ ಹೀಗ್ಗೆ 10 ವರ್ಷಗಳ ಹಿಂದೆ ಆಗಿರುತ್ತದೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಗಂಡ ಸ್ಟೌವ್ ಮಿಕ್ಸರ್ ರಿಪೇರಿ ಕೆಲಸ ಮಾಡುತ್ತಿದ್ದರು. ದಿನಾಂಕಃ 16.09.2022 ರಂದು ನನ್ನ ಗಂಡ ಮೈಸೂರಿನಿಂದ ಹುಳಿಯಾರಕ್ಕೆ ತಮ್ಮ ಬೈಕ್ ಅದರ ಸಂಖೆಃKA-51-EK-6122 ರಲ್ಲಿ ಬರುತ್ತಿರುವಾಗ ಮಧ್ಯಾಹ್ನ ಸುಮಾರು 4.50 ಕ್ಕೆ ಗೋಪಾಲಪುರ ಗ್ರಾಮದ ಈಶ್ವರ ದೇವಾಲಯ ಸಮೀಪ ನನ್ನ ಗಂಡ ಎಡಬದಿಯಲ್ಲಿ ಚಲಿಸುತ್ತಿರುವಾಗ ಹುಳಿಯಾರ ಕಡೆಯಿಂದ ಒಂದು ಟಾಟಾ ಎಸಿ ವಾಹನ ಅದರ ಸಂಖ್ಯೆಃ KA-44-A1202 ಚಾಲಕನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ನನ್ನ ಗಂಡನ ಬೈಕಿಗೆ ಡಿಕ್ಕಿ ಪಡೆಸಿದರು ಎಂದರೆ ಸರಿಯಲ್ಲ. ಆಗ ನನ್ನ ಗಂಡ ಬೈಕ್ ಸಮೇತ ಬಿದ್ದು ತಲೆಗೆ, ಎದೆಗೆ ತೀವ್ರ ಸ್ವರೂಪದ ಗಾಯವಾಗಿ ಮೃತಪಟ್ಟರು ಎಂದರೆ ಸರಿಯಲ್ಲ. ಬೈಕ್ ನ ಹಿಂಭಾಗದಲ್ಲಿ ಬರುತ್ತಿದ್ದ ಚಾಸಾ-2 ಕುಮಾರ್ ಎಂಬುವವರು ನನಗೆ ವಿಷಯ ತಿಳಿಸಿದರು ಎಂದರೆ ಸರಿಯಲ್ಲ. ನಾನು ತಕ್ಷಣ ಹೋಗಿ ನೋಡಿದಾಗ ನನ್ನ ಗಂಡನ ತಲೆಗೆ ತೀವ್ರ ಸ್ವರೂಪದ ರಕ್ತ ಗಾಯವಾಗಿ ಮೃತಪಟ್ಟಿದ್ದರು ಎಂದರೆ ಸರಿಯಲ್ಲ. ನಂತರ ನಾನು ಸ್ಥಳೀಯರ ಸಹಾಯದಿಂದ ಹುಳಿಯಾರ ಆಸ್ಪತ್ರೆಗೆ ನನ್ನ ಗಂಡನ ಶವವನ್ನು ಸಾಗಿಸಿದೆವು ಎಂದರೆ ಸರಿಯಲ್ಲ.

ನಂತರ ನಿಪಿ.1 ರಂತೆ ಠಾಣೆಗೆ ಹೋಗಿ ದೂರು ಸಲ್ಲಿಸಿದೆನು ಎಂದರೆ ಸರಿಯಲ್ಲ. ನನಗೆ ಅಪಘಾಗ ವಿಷಯ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.**)

ಓ.ಹೇ.ಕೆ.ಸರಿ ಇದೆ.

ಸಹಿ**/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,
ಚಿಕ್ಕನಾಯಕನಹಳ್ಳಿ.